**OCTOBER 06, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ನೆಲದ ಭಾಷೆ ಕನ್ನಡವನ್ನು ಬಿಟ್ಟು ಕೊಡುವ ಷ್ಟ, ಧಾರಾಳತನ ಸಲ್ಲ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ರಾಜ್ಯದ ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ, 'ಡೇ–ಕೇರ್, ಕಿಮೋ ಥೆರಪಿ ಕೇಂದ್ರ'ಗಳು, ಶೀಘ್ರ ಕಾರ್ಯಾರಂಭ – ದಿನೇಶ ಗುಂಡೂರಾವ್.**
- **ಸೈಬರ್ ಅಪರಾಧ ತಡೆಗಟ್ಟಲು, 'ಸೆನ್' ಠಾಣೆಗಳಿಗೆ, ಎಸ್.ಪಿ. ದರ್ಜೆಯ ಅಧಿಕಾರಿ – ಜಿ. ಪರಮೇಶ್ವರ.**
- **ಆರೋಗ್ಯ ಹಾಗೂ ಪರ್ಯಾಯ ಆದಾಯದ ಮೂಲ, ಸೊಪ್ಪಿನ ಕೃಷಿ – ಬಸವಶಾಂತಲಿಂಗ ಶ್ರೀ.**

<><><>

**ಈಗ ವಾರ್ತೆಗಳ ವಿವರ**

<><><>

**ಎಲ್ಲ ಭಾಷೆಗಳ ಬಗ್ಗೆ ಗೌರವ ಇರಲಿ; ಎಷ್ಟ ಭಾಷೆಗಳನ್ನಾದರೂ ಕಲಿಯೋಣ; ಆದರೆ ಈ ನೆಲದ ಭಾಷೆ ಕನ್ನಡವನ್ನು ಬಿಟ್ಟು ಕೊಡುವ ಷ್ಟ ಧಾರಾಳತನ ಬೇಡ, ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ನಾಮಕರಣ ಸಂಭ್ರಮ 50ರ ಅಂಗವಾಗಿ, ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ, 'ಗೋಕಾಕ ಚಳವಳಿ: ಹಿನ್ನೋಟ–ಮುನ್ನೋಟ' ಸಮಾವೇಶವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಗೋಕಾಕ ಚಳವಳಿಯ ಪರಿಣಾಮ, ರಾಜ್ಯದಲ್ಲಿ ಕನ್ನಡದ ವಾತಾವರಣ ವಿಸ್ತರಿಸಲು, ಕನ್ನಡ ಕಾವಲು ಸಮಿತಿಯನ್ನು ರಚಿಸಲಾಯಿತು. ಬಳಿಕ ಆ ಸಮಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಯಿತು ಎಂದರು. ಹಿರಿಯ ಕನ್ನಡ ಚಳವಳಿಗಾರರನ್ನು ಹಾಗೂ ಗೋಕಾಕ ಚಳವಳಿ ಹೋರಾಟಗಾರರನ್ನು, ಮುಖ್ಯಮಂತ್ರಿಯವರು ಸನ್ಮಾನಿಸಿದರು. ಇದಕ್ಕೂ ಮೊದಲು, ರಾಯಚೂರು ನಗರದ, ಬಸವೇಶ್ವರ ವೃತ್ತದಲ್ಲಿ, ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಶರಣ ಪ್ರಕಾಶ ಪಾಟೀಲ, ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು, ಕಲಾ ತಂಡಗಳ ಮೆರವಣಿಗೆಗೆ ಚಾಲನೆ ನೀಡಿದರು.**

<><><>

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ, 'ಡೇ-ಕೇರ್ ಕಿಮೋ ಥೆರಪಿ ಕೇಂದ್ರ'ಗಳು ಹಾಗೂ 'ಪುನೀತ ಹೃದಯ ಜ್ಯೋತಿ ಯೋಜನೆ', ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ, ಶೀಘ್ರ ಕಾರ್ಯಾರಂಭಿಸಲಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಮತ್ತು ನಾಯನಹಳ್ಳಿ ಗ್ರಾಮಗಳಲ್ಲಿ, ಉನ್ನತೀಕರಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಉದ್ಘಾಟಿಸಿ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಕ್ಯಾನ್ಸರ್ ಪೀಡಿತ ರೋಗಿಗಳಿಗೆ, ರಾಜ್ಯದ ಎಲ್ಲ ಜಿಲ್ಲಾ ಕೇಂದ್ರದಲ್ಲೇ ಕಿಮೋ ಚಿಕಿತ್ಸೆ ವ್ಯವಸ್ಥೆಗೊಳಿಸಲು, ನಿರ್ಧರಿಸಲಾಗಿದೆ. ಸದ್ಯ 75 ತಾಲೂಕು ಆಸ್ಪತ್ರೆಗಳಲ್ಲಿ ಲಭ್ಯವಿರುವ, ಪುನೀತ ಹೃದಯ ಜ್ಯೋತಿ ಯೋಜನೆ, ರಾಜ್ಯದ ಎಲ್ಲ ಆಸ್ಪತ್ರೆಗಳಿಗೂ ವಿಸ್ತರಿಸಿ, ಸದ್ಯದಲ್ಲೇ ಮುಖ್ಯಮಂತ್ರಿ ಚಾಲನೆ ನೀಡಲಿದ್ದಾರೆ ಎಂದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ 900 ಕೋಟಿ ರೂಪಾಯಿ ವೆಚ್ಚದಲ್ಲಿ ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು, ಸಚಿವ ದಿನೇಶ ಗುಂಡೂರಾವ್ ಹೇಳಿದರು.

<><><>

ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸೇರಿದ, 220ಕ್ಕೂ ಹೆಚ್ಚು ಅರ್ಹ ಪ್ರತಿಭಾವಂತ ಮಕ್ಕಳು, 'ವಿವೇಕ ಸ್ಕಾಲರ್ ಪ್ರೋಗ್ರಾಮ್' ಅಡಿ, ಉಚಿತವಾಗಿ ಪಿಯೂಸಿ ವಿಜ್ಞಾನ ವಿಷಯ ಓದಿ, ರಾಜ್ಯದ ವಿವಿಧ ಪ್ರತಿಷ್ಠಿತ ಕಾಲೇಜುಗಳಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ. ಧಾರವಾಡದ ಶ್ರೀಮತಿ ವಿದ್ಯಾ ಪಿ. ಹಂಚಿನಮನಿ ಪಿ.ಯು. ಕಾಲೇಜಿನಲ್ಲಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಹಯೋಗದಲ್ಲಿ ಆಯೋಜಿತ, ಪ್ರೇರಣಾ ಕಾರ್ಯಕ್ರಮದಲ್ಲಿ, 35 ವಿದ್ಯಾರ್ಥಿನಿಯರು ಹಾಗೂ 15 ವಿದ್ಯಾರ್ಥಿಗಳಿಗೆ, ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯ, ನಿವೃತ್ತ ಕಾರ್ಯದರ್ಶಿ ಜಿ.ಸಿ.ತಲ್ಲೂರ ಹಾಗೂ ಶಾಂತೇಶ ಎಜ್ಯುಕೇಷನ್ ಸೊಸೈಟಿ ಅಧ್ಯಕ್ಷ, ಪಿ.ಆರ್.ಹಂಚಿನಮನಿ ಸನ್ಮಾನಿಸಿ, ಗೌರವಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಪ್ರಾದೇಶಿಕ ಸಂಯೋಜಕ ಜಯಂತ ಕೆ.ಎಸ್. ಮಾಹಿತಿ ನೀಡಿದ್ದಾರೆ.

<><><>

ಜಯಂತ ಕೆ.ಎಸ್. ಧ್ವನಿ 40 ಸೆಕೆಂದುಗಳು

<><><>

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯೋಜಿಸಿದ್ದ, ರಾಜ್ಯ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ, ಬೆಳಗಾವಿ ತಾಲೂಕಿನ ಮಚ್ಚೆ ಗ್ರಾಮದ, ರಾಜ್ಯ ಮೀಸಲು ಪೊಲೀಸ್ ಪಡೆಯ, ಸರ್ಕಾರಿ ಪ್ರೌಢ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ, ದಿವ್ಯಾ ಶ್ರೀಶೈಲ ಗಾಣಿಗೇರ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಗಾಧೀಜಿಯವರ 155ನೇ ಜಯಂತಿಯಂದು, 31 ಸಾವಿರ ರೂಪಾಯಿ ನಗದು ಪುರಸ್ಕಾರ ಹಾಗೂ ಪ್ರಮಾಣಪತ್ರ ನೀಡಿ, ದಿವ್ಯಾ ಅವರನ್ನು ಗೌರವಿಸಿದರು. 1 ಲಕ್ಷ 24 ಸಾವಿರದ 392 ಪ್ರೌಢ ಶಾಲಾ ವಿದ್ಯಾರ್ಥಿಗಳ ಪೈಕಿ, ಪ್ರಥಮ ಪುರಸ್ಕಾರ ಪಡೆದ, ಮೂಲತಃ ಸವದತ್ತಿ ತಾಲೂಕು, ತಲ್ಲೂರು ಗ್ರಾಮದ ದಿವ್ಯಾ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ದಿವ್ಯಾ ಧ್ವನಿ 24ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಏರು ಗತಿಯಲ್ಲಿರುವ ಸೈಬರ್ ಅಪರಾಧಗಳನ್ನು ತಡೆಗಟ್ಟಲು, ಸೈಬರ್, ಆರ್ಥಿಕ ಹಾಗೂ ನಾರ್ಕೋಟಿಕ್ಸ್ – ಸೆನ್ ಠಾಣೆಗಳಿಗೆ, ಎಸ್.ಪಿ. ದರ್ಜೆಯ ಅಧಿಕಾರಿ  ನೇಮಿಸಲಾಗುವುದು ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ. ಧಾರವಾಡದ ರಾಷ್ಟ್ರೀಯ ವಿಧಿ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿ, ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ರಾಜ್ಯದಲ್ಲಿ ಒಟ್ಟು 43 'ಸೆನ್' ಪೊಲೀಸ್ ಠಾಣೆಗಳಿದ್ದು, ವಿಧಿ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ, ಸೆನ್ ಠಾಣೆಯ ಸಿಬ್ಬಂದಿಗೆ ವಿಶೇಷ ತರಬೇತಿ ಆಯೋಜಿಸಲಾಗುವುದು ಎಂದರು. ವಿಧಿ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾಕ್ಟರ್ ಮಂಜುನಾಥ ಘಾಟೆ ಮಾತನಾಡಿ, ಡಿಜಿಟಲ್ ವಿಧಿ ವಿಜ್ಞಾನ, ಔಷಧ ವಿಧಿ ವಿಜ್ಞಾನ, ಬಯೋಕೆಮಿಸ್ಟ್ರಿ ವಿಧಿ ವಿಜ್ಞಾನ, ಸೈಬರ್ ಸೆಕ್ಯೂರಿಟಿ ಹಾಗೂ ಪರಿಸರ ವಿಧಿ ವಿಜ್ಞಾನ ವಿಷಯಗಳನ್ನು ಇಲ್ಲಿ ಬೋಧಿಸಲಾಗುತ್ತದೆ ಎಂದರು.

<><><>

ಪರ್ಯಾಯ ಆದಾಯ ಮೂಲ ಸೃಷ್ಟಿಸಬಲ್ಲ, ಆರೋಗ್ಯವರ್ಧಕ 'ಸಾವಯವ ಸೊಪ್ಪು ಮೇಳ',  ರೈತರಲ್ಲಿ ಭರವಸೆ ಮೂಡಿಸಲು ಸಹಕಾರಿ ಎಂದು, ಹಾವೇರಿ ಹೊಸಮಠದ ಬಸವ ಶಾಂತಲಿಂಗ ಶ್ರೀಗಳು ಅಭಿಪ್ರಾಯಪಟ್ಟರು. ಸಹಜ ಸಮೃದ್ಧ, ಸಾವಯವ ಕೃಷಿಕರ ಬಳಗ ಹಾಗೂ ವನಸಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳು ಜೊತೆಗೂಡಿ, ಹೊಸಮಠದ, ಶ್ರೀ ಬಸವೇಶ್ವರ ಸಮುದಾಯ ಭವನದಲ್ಲಿ ಆಯೋಜಿಸಿರುವ, ಎರಡು ದಿನಗಳ 'ಸೊಪ್ಪಿನ ವಿಶೇಷ ಮೇಳ'ವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಶನಿವಾರ ಮೊದಲ ದಿನದ ಸೊಪ್ಪಿನ ಮೇಳದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸೊಪ್ಪು ಬೆಳೆಗಾರ ರೈತ ಮಹಿಳೆಯರ ಸಂಘಗಳ ಸಂಯೋಜಕಿ, ಶ್ರೀದೇವಿ.

<><><>

ಶ್ರೀದೇವಿ ಧ್ವನಿ 38 ಸೆಕೆಂದುಗಳು

<><><>

ಕಪ್ಪೆ ಚಿಪ್ಪುಗಳ ಮೂಲಕ ಸಿಹಿ ನೀರಿನ ಮುತ್ತು ಕೃಷಿ, ಏಡಿ ಸಾಕಾಣಿಕೆ ಹಾಗೂ ಅವುಗಳ ಸೇವನೆಯಿಂದ, ಆರೋಗ್ಯ ಲಾಭದ ಬಗ್ಗೆ ಮಾಹಿತಿ, ಸಿಹಿ ಹಾಗೂ ಉಪ್ಪು ನೀರಿನಲ್ಲಿ ಅಲಂಕಾರಿಕ ಮೀನು ಸಾಕಣೆ ಅಕ್ವೇರಿಯಂ ಪ್ರದರ್ಶಿನಿಯನ್ನು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಿದರು. ಮೈಸೂರು ದಸರಾ ಮಹೋತ್ಸವದ ಅಂಗವಾಗಿ, ನಗರದ ಜೆ.ಕೆ. ಮೈದಾನದಲ್ಲಿ  ಮೀನುಗಾರಿಕೆ ಇಲಾಖೆ ಆಯೋಜಿಸಿದ ಮತ್ಸ್ಯ ಮೇಳ ಗಮನ ಸೆಳೆಯುವಂತಿದೆ. ಸ್ವಯಂ ಉದ್ಯೋಗ ಕೈಗೊಳ್ಳ ಬಯಸುವ ಯುವ ಜನತೆಗೆ, ಮಾರ್ಗದರ್ಶಿಯಾಗಿದೆ. ಮನೆಗಳಲ್ಲಿ ಮೀನು ಸಾಕಾಣಿಕೆ ಮಾಡಬಯಸುವವರಿಗೆ ಮಾಹಿತಿ ನೀಡುವ ವ್ಯವಸ್ಥೆ ಸಹ ಇಲ್ಲಿದೆ.

<><><>

ಬಳಿಕ ಕೃಷಿ ಖಾತೆ ಸಚಿವರು, ಜೆ.ಕೆ. ಮೈದಾನದಲ್ಲಿ, ರೈತ ದಸರಾ ಉದ್ಘಾಟಿಸಿ, ಕೃಷಿಯಲ್ಲಿ ಯಂತ್ರಗಳ ಪರಿಣಾಮಕಾರಿ ಅಳವಡಿಕೆ ಖಾತ್ರಿ ಪಡಿಸಲು, ಕೃಷಿ ಇಲಾಖೆ ವತಿಯಿಂದ, ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ, ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗಿದೆ. ರೈತರ ಆದಾಯ ಹೆಚ್ಚಿಸಲು, ಸಮಗ್ರ ಮತ್ತು ಪರ್ಯಾಯ ಕೃಷಿಗೆ ಒತ್ತು ನೀಡಲಾಗಿದೆ ಎಂದರು.

<><><>

ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಭಯಾರಣ್ಯ ವ್ಯಾಪ್ತಿಯಲ್ಲಿ, ರಾಜ್ಯದ ಮತ್ತೊಂದು ಆನೆ ಸಂರಕ್ಷಣೆ, ಆರೈಕೆ ಮತ್ತು ಪುನರ್ವಸತಿ ಶಿಬಿರ ಆರಂಭಿಸಲಾಗುವುದು ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ರಾಜ್ಯದ ಕಾಡಂಚಿನ ಗ್ರಾಮಗಳಲ್ಲಿ, ಆನೆಗಳ ಹಾವಳಿ ನಿಯಂತ್ರಿಸಲು, ಮುಂದಿನ ಎರಡು ವರ್ಷಗಳಲ್ಲಿ, 300 ಕಿಲೋ ಮೀಟರ್ ರೈಲು ಕಂಬಿ ತಡೆಗೋಡೆ ನಿರ್ಮಿಸಲು ಕ್ರಮ ಕೈಗೊಳ್ಳುವುದಾಗಿ, ಹೇಳಿದ್ದಾರೆ. ರಾಜ್ಯದ ಚಾರಣ ತಾಣಗಳಿಗೆ ಆನ್‌ಲೈನ್‌ನಲ್ಲಿ ಟಿಕೆಟ್ ಕಾಯ್ದಿರಿಸುವ, ಜಾಲತಾಣಕ್ಕೆ ಸಚಿವ ಈಶ್ವರ್ ಖಂಡ್ರೆ ಚಾಲನೆ ನೀಡಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮೈಸೂರು ಯುವ ದಸರಾ ಸಾಂಸ್ಕೃತಿಕ ಉತ್ಸವ, ಇಂದಿನಿಂದ 10ನೇ ತಾರೀಖಿನ ವರೆಗೆ ನಡೆಯಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು, ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ತಿಳಿಸಿದ್ದಾರೆ.

<><><>

ಬಳ್ಳಾರಿ ನಗರದ, ಗಡಿಗಿ ಚನ್ನಪ್ಪ ವೃತ್ತದಲ್ಲಿ, 120 ಅಡಿ ಎತ್ತರದ ಗಡಿಯಾರ ಕಂಬ, 'ಕ್ಲಾಕ್ ಟಾವರ್'ನ್ನು, ಶಾಸಕ ನಾರಾ ಭರತ್ ರೆಡ್ಡಿ ಲೋಕಾರ್ಪಣೆಗೊಳಿಸಿದರು.

<><><>

ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಬಟ್ಟೂರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕುಂದ್ರಳ್ಳಿ, ಕುಂದ್ರಳ್ಳಿ ತಾಂಡಾ, ಬಟ್ಟೂರ ಹಾಗೂ ಶೆಟ್ಟಿಕೇರಿ ಗ್ರಾಮಗಳಲ್ಲಿ ಸಂಶಯಾಸ್ಪದ ರೇಬಿಸ್ ಕಾಯಿಲೆ ಕಂಡುಬಂದಿದ್ದು, ಮುಂಜಾಗ್ರತೆ ವಹಿಸುವಂತೆ, ತಾಲೂಕಾಡಳಿತ ಮನವಿ ಮಾಡಿದೆ.

<><><>

ಹಾವೇರಿ ಜಿಲ್ಲೆ, ಶಿಗ್ಗಾಂವಿ ಸಂತೆ ಮೈದಾನದಲ್ಲಿ ಜರುಗಿದ, ಶಿಗ್ಗಾಂವ–ಸವಣೂರ ಜನ ಸ್ಪಂದನದಲ್ಲಿ, 226 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ನೆಲದ ಭಾ ೆ ಕನ್ನಡವನ್ನು ಬಿಟ್ಟು ಕೊಡುವ ್ಟು, ಧಾರಾಳತನ ಸಲ್ಲ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ರಾಜ್ಯದ ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ, 'ಡೇ–ಕೇರ್', ಕಿಮೋ ಥೆರಪಿ ಕೇಂದ್ರ'ಗಳು, ಶೀಘ್ರ ಕಾರ್ಯಾರಂಭ – ದಿನೇಶ ಗುಂಡೂರಾವ್.
- ಸೈಬರ್ ಅಪರಾಧ ತಡೆಗಟ್ಟಲು, 'ಸೆನ್' ಠಾಣೆಗಳಿಗೆ, ಎಸ್.ಪಿ. ದರ್ಜೆಯ ಅಧಿಕಾರಿ – ಜಿ. ಪರಮೇಶ್ವರ.
- ಆರೋಗ್ಯ ಹಾಗೂ ಪರ್ಯಾಯ ಆದಾಯದ ಮೂಲ, ಸೊಪ್ಪಿನ ಕೃಷಿ – ಬಸವಶಾಂತಲಿಂಗ ಶ್ರೀ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ